ಶ್ರೀ ವಾಟಾಳ್ ನಾಗರಾಜ್ : ಮನವಿ ಮಾಡುತ್ತಿದ್ದೇವೆ.

ಅಧ್ಯಕ್ಷರು : ತಾವು ಇದನ್ನೆಲ್ಲಾ ನಿನ್ನೆ ಹೇಳಿದ್ದೀರಿ.

ಶ್ರೀ ವಾಟಾಳ್ ನಾಗರಾಜ್ : ಅಪ್ಪಣೆ ಕೊಡಿಸತಕ್ಕ ಸ್ಥಳದಲ್ಲಿ ತಾವು ಇದ್ದೀರಿ. ನಮ್ಮದು ಬೇಡಿಕೆ ಮತ್ತು ಮನವಿ ಸ್ಥಾನದಲ್ಲಿ ಇದ್ದೇವೆ. ಆದ್ದರಿಂದ ನಾವು ತಮಗೆ ಅಪ್ಪಣೆ ಕೊಡುವುದಕ್ಕೆ ಅವಕಾಶ ಇಲ್ಲ.

ಅಧ್ಯಕ್ಷರು : ನಾಳೆ ತೆಗೆದುಕೊಳ್ಳೋಣ.

ನಿಲುವಳಿ ಸೂಚನೆ

ರಾಜ್ಯದಲ್ಲಿ ಅಸಮರ್ಪಕ ವಿದ್ಯುಚ್ಛಕ್ತಿಯ ನಿರ್ವಹಣೆ

ಶ್ರೀ ಡಿ.ಬಿ. ಚಂದ್ರೇಗೌಡ : 59-60ನೇ ವಿಧಿಯಂತೆ ಒಂದು ನಿಲುವಳಿ ಸೂಚನೆಯನ್ನು ನಾವೆಲ್ಲಾ ಕಳಿಸಿಕೊಟ್ಟಿದ್ದೇವೆ. ಬಹುತೇಕವಾಗಿ ಎಲ್ಲರೂ ಇದಕ್ಕೆ ಸಹಿ ಹಾಕಿದ್ದಾರೆ. ಈ ಸಮಸ್ಯೆ ಎಷ್ಟು ತೀಕ್ಷ್ಣವಾಗಿದೆ ಮೂವ ಪ್ರತಿಧ್ವನಿಯ ಕಾರಣ ಎಲ್ಲರೂ ಬಹುತೇಕವಾಗಿ ಸಹಿ ಹಾಕಿದ್ದಾರೆ.

ಮಾನ್ಯ ಅಧ್ಯಕ್ಷರೇ, ಕಳೆದ ಕೆಲವು ದಿವಸಗಳಿಂದ ರಾಜ್ಯದಲ್ಲಿ ವಿದ್ಯುತ್‌ಚ್ಛಕ್ತಿ ನಿರ್ವಹಣೆಯ ಬಗ್ಗೆ ನೋಡಿದರೆ ನಮಗೇ ಆಶ್ಚರ್ಯವಾಗುತ್ತದೆ. ಅಂದರೆ, ಈ ಬಾರಿ ವಿದ್ಯುತ್‌ಚ್ಛಕ್ತಿ ಉತ್ಪಾದನೆಗೆ ಅಗತ್ಯವಾಗಿರತಕ್ಕಂಥ ನೀರು ಲಿಂಗನಮಕ್ಕಿಯಲ್ಲಿ ಸಂಗ್ರಹವಾಗಿದೆ. ವಾರಾಹಿ ಕಾರ್ಯಾಗಾರ ತನ್ನ ಕೆಲಸವನ್ನು ಪ್ರಾರಂಭ ಮಾಡಿದೆ. ರಾಯಚೂರು ಥರ್ಮಲ್ ಪ್ರಾಜೆಕ್ಟ್‌ನಲ್ಲಿ ಪೂರ್ಣಪ್ರಮಾಣದ ವಿದ್ಯುತ್ ಉತ್ಪಾದನೆಯಾಗುತ್ತಾ ಇದೆ, ಹೈಡ್ರೋಪ್ರಾಜೆಕ್ಟ್‌ನಲ್ಲಿ ಉತ್ಪಾದನೆಯಾಗುತ್ತಾ ಇದೆ. ಇದನ್ನೆಲ್ಲಾ ನೋಡಿದಾಗ ಮಂಡಳಿಯ ಅಸಮರ್ಪಕವಾದಂಥ ಆಡಳಿತದ ದೋಷ ಹಾಗೂ ವಿತರಣೆಯಲ್ಲಿನ ಅಸಮಾಧಾನಕರವಾದಂಥ ನಿರ್ವಹಣೆಯಿಂದಾಗಿ ಪ್ರಕೃತಿಯು ಕೊಟ್ಟಂಥ ವರವನ್ನು ಜನರಿಗೆ ಈ ಸರಕಾರದವರು ಶಾಪವಾಗಿ ಪರಿವರ್ತಿಸಿದ್ದಾರೆ ಎಂದು ಹೇಳಬೇಕಾಗುತ್ತದೆ. ರಾಜ್ಯದಲ್ಲಿ ಇಂದು ಎಲ್ಲಿಯೂ ಕೂಡ ಒಂದು ಗಂಟೆಯ ಕಾಲದ ನಿರಂತರವಾದ ವಿದ್ಯುತ್ ಪೂರೈಕೆಯಾಗುತ್ತಿಲ್ಲ. ಈ ವಿಚಾರವನ್ನು ಎಲ್ಲಾ ಮಾನ್ಯ ಸದಸ್ಯರುಗಳು ಒಪ್ಪುತ್ತಾರೆಂದು ನಾನು ಭಾವಿಸುತ್ತೇನೆ. ನಾನು ವಿರೋಧಪಕ್ಷದ ನಾಯಕನಾಗಿ ಹೇಳುತ್ತಾ ಇಲ್ಲ. ಬಹುಶಃ ಗ್ರಾಮಾಂತರ ಪ್ರದೇಶದಿಂದ ಬಂದಿರತಕ್ಕಂಥ ಪ್ರತಿಯೊಬ್ಬರಿಗೂ ಇದು ಆಗಿರತಕ್ಕಂಥ ಅನುಭವ ಎಂದು ಅಂದುಕೊಂಡಿದ್ದೇನೆ. ಒಂದು ಗಂಟೆ ಕೂಡ ಪೂರ್ತಿಯಾಗಿ ವಿದ್ಯುತ್‌ಚ್ಛಕ್ತಿ ಪೂರೈಕೆಯಾಗುತ್ತಿಲ್ಲ. ಈ ಒಂದು ಪರಿಸ್ಥಿತಿಯಿಂದ ಕೃಷಿ ಕೆಲಸ ಕಾರ್ಯಗಳಿಗೆ ತುಂಬಾ ತೊಂದರೆಯಾಗಿ ಸಂಪೂರ್ಣವಾಗಿ ನಿಂತು ಹೋಗಿದೆ. ಸುಡತಕ್ಕಂಥ ಬೇಸಿಗೆಯಲ್ಲಿ ಕುಡಿಯುವ ನೀರು ಇಲ್ಲ, ಗ್ರಾಮಾಂತರ ಪ್ರದೇಶಗಳಲ್ಲಿನ ವಿದ್ಯಾರ್ಥಿಗಳಿಗೆ ಸಾಯಂಕಾಲದ ಹೊತ್ತು ಓದಲು ಸಾಧ್ಯವಾಗುತ್ತಾ ಇಲ್ಲ. ಏನೋ ಡ್ರಿಪ್ಪಿಂಗ್ ಎಂದು ಹೇಳುತ್ತಾರೆ, ಒಟ್ಟಿನಲ್ಲಿ ನಮಗೆ ವಿದ್ಯುತ್ ಇಲ್ಲ, ದೀಪಗಳು ಇಲ್ಲ. ನಾವುಗಳು ಹಳ್ಳಿಯಿಂದ ಬರತಕ್ಕಂಥವರು. ಗ್ರಾಮಾಂತರ ಪ್ರದೇಶಗಳಲ್ಲಿ ಮಕ್ಕಳು ತಮ್ಮ ಅಭ್ಯಾಸವನ್ನು ಮಾಡಲು ಪರೀಕ್ಷೆ ಓದಲು ಅವರಿಗೆ ದೀಪ ಇಲ್ಲ. ಇನ್ನು ನಮ್ಮ ಪ್ಲಾಂಟೇಶನ ವಿಚಾರದಲ್ಲಿ ಹೇಳುವುದಾದರೆ, ಮಾರ್ಚ್, ಏಪ್ರಿಲ್ ತಿಂಗಳಲ್ಲಿ ಸುಮಾರು 650ಕೋಟಿ ರೂಪಾಯಿಗಳ ವ್ಯವಹಾರ ಮಾಡತಕ್ಕಂಥ ಕಾಫಿಪ್ಲಾಂಟೇಶನ್‌ನಲ್ಲಿ ಸುಮಾರು 450 ಕೋಟಿಗಳಿಗಿಂತ ಹೆಚ್ಚು ವಿದೇಶಿ ವಿನಿಮಯ ಮಾಡಿಕೊಡತಕ್ಕಂಥ

ಪ್ಲಾಂಟೇಶನ್ಸ್‌ನಲ್ಲಿ ನಮ್ಮ ಕರ್ನಾಟಕದ ಪಾಲು 300 ಕೋಟಿ ರೂಪಾಯಿಗಳು. ಇಂಥ ದೊಡ್ಡ ಮೊತ್ತದ ವಿದೇಶಿ ವಿನಿಮಯ ಸಂಪಾದನೆ ಮಾಡತಕ್ಕಂಥ ಪ್ಲಾಂಟೇಶನ್ಸ್‌ಗೆ ಈಗ ಸ್ಟ್ರಿಕ್ಲರ್ ಇರಿಗೇಶನ್‌ಗೆ ಸಕಾಲದಲ್ಲಿ ವಿದ್ಯುತ್‌ಚ್ಛಕ್ತಿ ಇಲ್ಲದಿದ್ದರೆ ಒಟ್ಟು ಪ್ಲಾಂಟೇಶನ್ ಸಂಪೂರ್ಣವಾಗಿ ಸ್ಥಗಿತಗೊಳ್ಳುತ್ತದೆ. ಹೀಗೆ ಆದರೆ- ಮುಂದಿನ ಸಾರಿ ಇದರ ಅರ್ಧದಷ್ಟು ಕೂಡ ಉತ್ಪಾದನೆ ಆಗಲಾರದು. ಇನ್ನು ಲೋಡ್ ಶೆಡ್ಡಿಂಗ್ ವಿಚಾರ. ಹೋದ ಸಾರಿ ನಾನು ಈ ವಿಚಾರ ಪ್ರಸ್ತಾಪ ಮಾಡಿದಾಗ ಇಲ್ಲಿ ಒಂದು ದೊಡ್ಡ ಕೋಲಾಹಲ ಆಯಿತು. ವಿದ್ಯುತ್‌ಚ್ಛಕ್ತಿ ಮಂಡಳಿಯ ಅಧ್ಯಕ್ಷರು ಪರ್‌ಚೇಸಿಂಗ್‌ನಲ್ಲಿ ಇದ್ದಾರೆ. ಟೆಕ್ನಿಕಲ್ ವಿಚಾರದಲ್ಲಿ ಅವರು ಗಮನ ಹರಿಸಿಲ್ಲ. ಅವರು ಏನು ಪರ್‌ಚೇಸ್ ಮಾಡುತ್ತಾ ಇದ್ದಾರೋ ಗೊತ್ತಿಲ್ಲ. ಬೆಂಗಳೂರು ಮತ್ತಿತರ ಕಡೆಗಳಲ್ಲಿ ಪ್ರತಿತಿಂಗಳೂ 8-9 ಸಾವಿರ ಎಂ.ವಿ.ಪವರ್ ಕೇಳುತ್ತಾ ಇದ್ದಾರೆ. ಸುಮಾರು ಪ್ರತಿ ತಿಂಗಳಿಗೂ 50 ಎಂ. ವಿ. ಪವರ್ ಹೊಸದಾಗಿ ಬೇಡಿಕೆ ಬರುತ್ತಾ ಇದೆ. ಹೀಗಾಗಿ ಸುಮಾರು 600 ಎಂ.ವಿ. ಬೇಡಿಕೆ ಪೂರೈಸಬೇಕಾಗುತ್ತದೆ. ಇನ್ನು ಟ್ರಾನ್ಸ್‌ಪರ್ಮರ್ಸ್ ವಿಚಾರದಲ್ಲಿ ಹಿಂದೆ ಸುಮಾರು ವರ್ಷಕ್ಕೆ 7-8 ಸಾವಿರದಷ್ಟು ಫೇಲ್ ಆಗುತ್ತಾ ಇದ್ದುವು. ಈಗ 20 ಸಾವಿರ ಟ್ರಾನ್ಸ್‌ಫಾರ್ಮರ್ಸ್ ಫೇಲ್ ಆಗುತ್ತಾ ಇದೆ. ಈಗ ಒಂದು ಟ್ರಾನ್ಸ್‌ಪರ್ಮರ್ ಶಕ್ತಿ ನೂರಕ್ಕೆ ನೂರರ ಬದಲು ಒಂದೂವರೆ ಪಟ್ಟು ಜಾಸ್ತಿ ಆಗುವ ಹಾಗೆ ಉಪಯೋಗ ಮಾಡುತ್ತಿರಬಹುದು. ಇದು ಓವರ್ ಲೋಡ್ ಆಗಿ ಫೇಲ್ ಆಗುತ್ತಿರ ಬಹುದು.

Mr. Speaker : Are you getting in to the debate?

Shri. D.B. Chandre Gowda : No. I am not getting in to debate.

Mr Speaker : You have to make out a case how the matter becomes an urgent, so that I can act upon it

ಶ್ರೀ ಡಿ.ಬಿ. ಚಂದ್ರೇಗೌಡ : ಮೊದಲು ಏನು ಮಾಡುತ್ತಾ ಇದ್ದರು, 24 ಗಂಟೆಗಳ ಕಾಲವೂ ಪವರ್ ಕೊಡುತ್ತಾ ಇದ್ದರು. ಆಗ ಬೇಕಾದವರು ತಮಗೆ ಬೇಕಾದ ಹಾಗೆ ಉಪಯೋಗ ಮಾಡುತ್ತಾ ಇದ್ದರು. ಈಗ ಹಾಗಲ್ಲ, ದಿನದಲ್ಲಿ ಒಂದು ಗಂಟೆ ಇಷ್ಟು ಹೊತ್ತಿಗೆ ಕೊಡುತ್ತೇವೆ ಎಂದರೆ ಎಲ್ಲರೂ ಅದೇ ಸಮಯಕ್ಕಾಗಿ ಕಾದು ಕುಳಿತು ಕೊಳ್ಳುವುದರಿಂದ ಓವರ್ ಲೋಡ್ ಆಗುತ್ತದೆ.

ಟ್ರಾನ್ಸ್‌ಫಾರ್ಮರ್‌ಗಳು ಸಟ್ಟುಹೋಗುತ್ತವೆ. ಯಾರಿಗಾದರೂ ಜವಾಬ್ದಾರಿ ಇದೆಯೋ? ರಾಮಪ್ಪನವರಿಗೆ ಎಷ್ಟು ಜವಾಬ್ದಾರಿ ಇದೆಯೋ ನನಗೆ ಗೊತ್ತಿಲ್ಲ. ಬಹಳ ನೊಂದು ಈ ಮಾತು ಹೇಳುತ್ತಾ ಇದ್ದೇನೆ. ಬಹುತೇಕವಾಗಿ ಗ್ರಾಮೀಣ ಜನರ ಜೀವನ, ಅವರು ವಿದ್ಯುಚ್ಛಕ್ತಿಯನ್ನೇ ಅವಲಂಬಿಸಿ ಬದುಕಿದ್ದಾರೆ ನಿಮ್ಮ ಕೆಇಬಿಯನ್ನು ಯಾರು ಮ್ಯಾನೇಜ್ ಮಾಡುತ್ತಾ ಇದ್ದಾರೋ ಅದು ಯಾರ ಹತೋಟಿಯಲ್ಲಿದೆ ಎಂದು ಅದನ್ನಾದರೂ ಸದನಕ್ಕೆ ಹೇಳಿ. ಇಲ್ಲದಿದ್ದರೆ ರೈತರಿಗೆ ಪವರ್ ಕೊಡುವುದಿಲ್ಲ ಎಂದಾದರೂ ಹೇಳಿ. ವಾರಕ್ಕೆ ಒಂದು ದಿವಸ 25 ಗಂಟೆ ಕರೆಂಟ್ ಕೊಡುತ್ತೇವೆ ಎರಡು ದಿವಸ ಕೊಡುತ್ತೇವೆ. 12 ಗಂಟೆ ಅಂತ ಹೇಳಿ. ಯಾವರೀತಿ ಮ್ಯಾನೇಜ್‌ಮೆಂಟಿದು? What type of management are you having? ಇಲ್ಲದಿದ್ದರೆ ರಾಜ್ಯಾದ್ಯಂತ ರೈತರು ಕೆಇಬಿ ವಿರುದ್ಧ ದೊಡ್ಡ ಪ್ರಮಾಣದ ಹೋರಾಟಕ್ಕೆ ಇಳೀಬೇಕಾಗುತ್ತದೆ. ತುಮಕೂರಿನಲ್ಲಿ ಏನಾಯ್ತು ಎಂದು ತಮಗೆ ಕಲ್ಪನೆ ಇದೆ, ಕೋಲಾರದಲ್ಲಿ ಏನಾಯ್ತು ಅಂತ ಕಲ್ಪನೆ ಇರಬಹುದು.

ನಾಳೆ ನಾಡಿದ್ದು ಬೆಂಗಳೂರು ರೂರಲ್ ಪ್ರದೇಶದ ರೈತರು ಆಗಲೇ ಕೆಇಬಿ ವಿರುದ್ಧ ಹೋರಾಟಕ್ಕೆ ಸಜ್ಜಾಗುತ್ತಿದ್ದಾರೆ. ಇದು ರಾಜ್ಯಾದ್ಯಂತ ದೊಡ್ಡ ಕಾನೂನು ಮತ್ತು ಸುವ್ಯವಸ್ಥೆ ಪ್ರಶ್ನೆ ಆಗುತ್ತದೆ. ಆ ಕಾರಣಕ್ಕಾಗಿ ಇದಕ್ಕೆ ಒಂದು ವಿಶೇಷವಾದ ಸಮಯವನ್ನು ಗೊತ್ತುಮಾಡಿ. ಇಲ್ಲವೇ ನಿಲುವಳಿ ಸೂಚನೆಯನ್ನು ಅಂಗೀಕರಿಸಿ ವಿಶೇಷ ಚರ್ಚೆಗೆ ನಮಗೆ ಅವಕಾಶ ಕೊಡಿ. ಹಾಗಿಲ್ಲದೇ ಇದ್ದರೆ ನಾವು ರೈತ ಪ್ರತಿನಿಧಿಗಳಾಗಿ ಈ ಸದನದಲ್ಲಿ ಕೆಲಸ ಮಾಡೋದಕ್ಕಾಗೋದಿಲ್ಲ. ನಾವು ಹೊರಗಡೆ ಹೋಗೋ ಹಾಗಿಲ್ಲ. ಆ ಕಾರಣದಿಂದ ತಮ್ಮಲ್ಲಿ ಅತ್ಯಂತ ಕಳಕಳಿಯಿಂದ ಮನವಿ ಮಾಡುತ್ತೇನೆ. ಈ ದಿವಸ ಈ ಕೆ.ಇ.ಬಿ. ಕಾರ್ಯದ ಅದಕ್ಷತೆ ಬಗ್ಗೆ ಚರ್ಚೆ ಮಾಡುವುದಕ್ಕಾಗಿ ತಾವು ನಿಲುವಳಿ ಸೂಚನೆಯನ್ನು ಅಕ್ಸೆಪ್ಟ್ ಮಾಡಿಕೊಂಡು ನಮಗೆ ಅವಕಾಶ ಕೊಡಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡ್ತೇನೆ.ಎಲ್ಲಾ ನಿಯಮಗಳನ್ನು ಅನುಸರಿಸಿ ನಿಲುವಳಿ ಸೂಚನೆ ಕಳಿಸಿದ್ದೇವೆ ನಾವು. ಇದು ನಮ್ಮ ಮೊದಲನೆಯ ನಿಲುವಳಿ ಸೂಚನೆ. ತಾವು ಅದನ್ನು ಎತ್ತಿ ಬಿಸಾಕಿಬಿಡಬೇಡಿ. ರೈತರು ನಮಗೆ ಬೇಕಾದವರು ರಾಮಪ್ಪನವರಿಗೆ ಮಾಡೋ ಕೆಲಸ ನಮಗೆ ಮಾಡುತ್ತಾರೆ. ಆ ಕೆಲಸ ತಾವು ಮಾಡಕೂಡದು, ನಮಗೆ ಅನುಮತಿ ಕೊಡಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

+ ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ): ಈ ನಿಲುವಳಿ ಸೂಚನೆಯನ್ನು ತಾವು ದಯವಿಟ್ಟು ಅಂಗೀಕರಿಸಿ ಇದು ಕೆಇಬಿ ಬಗ್ಗೆ ಇಡೀ ರಾಜ್ಯದಲ್ಲಿರುವ ಅವ್ಯವಸ್ಥೆಯನ್ನು ಸರಿ ಮಾಡಿಲಿಕ್ಕೆ ಮಣ್ಣಿನ ಮಗ ಆಗಿರುವ ತಾವು ನಮಗೆ ಸಹಾಯ ಮಾಡಬೇಕೆಂದು ಹೇಳಿ ನಾನು ನಿಮ್ಮ ಮನವೊಲಿಸಿಕೊಳ್ಳಲಿಕ್ಕೆ ಪ್ರಯತ್ನ ಮಾಡುತ್ತೇನೆ. ಈ ಕೆ.ಇ.ಬಿ ಬಗ್ಗೆ ನಾವು ಸಾಕಷ್ಟು ಚರ್ಚೆ ಮಾಡಿದ್ದೇವೆ. ಇಂದು ಕೆಇಬಿ ಸಂಬಂಧಿಸಿದಂತೆ ಅನೇಕ ಆಡಳಿತ ಮತ್ತು ವಿರೋಧ ಪಕ್ಷಗಳ ಸದಸ್ಯರ ಪ್ರಶ್ನೆಯನ್ನೂ ಹಾಕಿದ್ದಾರೆ. ತಮ್ಮ ಕ್ಷೇತ್ರದಿಂದಲೂ ಅನೇಕ ರೈತರು ತಮ್ಮನ್ನು ಭೇಟಿ ಮಾಡಿ ವಿಷಯ ತಿಳಿಸಿರಬಹುದು. ಈಗಾಗಲೇ. ಈ ವರ್ಷ ಚೆನ್ನಾಗಿ ಮಳೆಯಾಗಿರುವುದರಿಂದ ಬಾವಿಗಳಲ್ಲಿ ನೀರಿದೆ, ಬೋರ್‌ವೆಲ್‌ಗಳು ಸಂಪೂರ್ಣವಾಗಿ ಬತ್ತಿ ಹೋಗಿಲ್ಲ ಆದರೆ ಕರೆಂಟಿಲ್ಲ. ಹೋದವರ್ಷ ನೀರಿರಲಿಲ್ಲ. ಅಲ್ಪಸ್ವಲ್ಪ ಕರೆಂಟ್ ಕೊಡುತ್ತಾ ಇದ್ದಾರು. ವ್ಯವಸಾಯ ಮಾಡುವುದಕ್ಕಾಗುತ್ತಾ ಇರಲಿಲ್ಲ. ಈ ವರ್ಷ, ನೀರಿದೆ ಕರೆಂಟ್ ಕೊಡದೇ ಇರುವುದರಿಂದಾಗಿ ಎಲ್ಲಾ ರೈತರ ತೋಟಗಳೂ ಒಣಗುವ ಪರಿಸ್ಥಿತಿ ಬಂದಿದೆ. ಮಾನ್ಯ ಅಧ್ಯಕ್ಷರೇ, ವಿಶೇಷವಾಗಿ ಹೇಳುತ್ತಿದ್ದೇನೆ ಕೋಲಾರ, ಬೆಂಗಳೂರು, ಗ್ರಾಮಾಂತರ, ತುಮಕೂರು ಜಿಲ್ಲೆಗಳಲ್ಲಿ ರೇಷ್ಮೆ ವ್ಯವಸಾಯವನ್ನು ನಂಬಿಕೊಂಡಿರುವ ನಮ್ಮ ಎಲ್ಲಾ ರೇಷ್ಮೆ ಬೆಳೆಗಳೂ ಒಣಗಿಹೋಗುವ ಪರಿಸ್ಥಿತಿ ಬಂದಿದೆ. ಕೆಲವು ಜಿಲ್ಲೆಗಳಲ್ಲಂತೂ ತೆಂಗಿನಮರಗಳೂ ಒಣಗುವ ಪರಿಸ್ಥಿತಿ ಬಂದಿದೆ. ರಾಮಪ್ಪನವರು ಹೋಗಿ ನೋಡಿದ್ದಾರೋ ಇಲ್ಲವೋ ಗೊತ್ತಿಲ್ಲ. ನಾನು ಬಹಳ ಕಳಕಳಿಯಿಂದ ಈ ಮಾತು ಹೇಳುತ್ತಿದ್ದೇನೆ. ಇವತ್ತು ನಿಮ್ಮ ಸರ್ಕಾರಕ್ಕೆ ನಿಮಗೆ ರೈತರು ಶಾಪ ಹಾಕುಕುತ್ತಿದ್ದಾರೆ. ಇದರಲ್ಲಿ ನಾನು ರಾಜಕೀಯ ಬೆರಸಲಿಕ್ಕೆ ಪ್ರಯತ್ನಿಸುತ್ತಿಲ್ಲ. ನಾನು ಹೇಳ್ತಾ ಇದ್ದೇನೆ. ಒಂದು ದಿನದಲ್ಲಿ ಕನಿಷ್ಟ ಅರ್ಧ ಗಂಟೆ ಕಂಟಿನ್ಯೂಸಾಗಿ ನಮಗೆ ಕರೆಂಟ್ ಸಿಗುತ್ತಾ ಇಲ್ಲ. ರೈತರು ಹೇಗೆ ಬದುಕುವುದು ದಯವಿಟ್ಟು ತಿಳಿಸಿ. ಇಂದು ಯಾರಿಗಾದರೂ ಅಧಿಕಾರಿಗಳಿಗೆ ಹೇಳಬೇಕೆಂದರೆ ಕೇಳುವವರೇ ಇಲ್ಲ. ಅಧಿಕಾರಿಗಳು ಸಿಗೋದಿಲ್ಲ. ಇಂದು ಇಡೀ ಕ್ಷೇತ್ರದ ಮಾನ್ಯ ಸದಸ್ಯರು ಹೇಳಿದರು ಒಂದು ಸಾವಿರದ 500 ಐಪಿ ಸೆಟ್‌ಗಳು ಸುಟ್ಟುಹೋಗಿವೆ. ಎಂದು ನಾನು

ಹೇಳ್ತಾ ಇದೇನೆ, ಇಂದು ರಾಜ್ಯದಲ್ಲಿ ಲಕ್ಷಾಂತರ ಐಪಿ ಐಪಿ ಸೆಟ್‌ಗಳು ಸಂಪೂರ್ಣವಾಗಿ ಸುಟ್ಟುಹೋಗಿದೆ. ಅದಕ್ಕೆ ಯಾರು ಕಾಂಪೆನ್‌ಸೆಶನ್ ಕೊಡುವವರು? ಈ ವಿಚಾರದಲ್ಲಿ ಎರಡೂ ಪಕ್ಷಗಳ ಸದಸ್ಯರೂ ಈ ವಿಚಾರವನ್ನು ಒಪ್ತಾರೆ. ವಿದ್ಯುತ್ ವಿತರಣೆಯಲ್ಲಿ ಈ ಸರ್ಕಾರ ಸಂಪೂರಣವಾಗಿ ವಿಫಲವಾಗಿದೆ. ಆದ್ದರಿಂದ ನಾನು ಒತ್ತಾಯ ಮಾಡ್ತಾಯಿದ್ದೇನೆ. ತಾವು ದಯವಿಟ್ಟು ಈ ನಿಲುವಳಿ ಸೂಚನೆಗೆ ಅವಕಾಶ ಮಾಡಿಕೊಡಿ ಇದಕ್ಕೆ ಅವಕಾಶ ಕೊಟ್ಟು ಏನಾದರೂ ಒಂದು ಪರಿಹಾರ ಕೊಡಲೇಬೇಕು. ಸುಮ್ಮನೆ ಆಯಿತು. ನೋಡುತ್ತೇನೆ. ಅಧಿಕಾರಿಗಳಿಗೆ ಹೇಳುತ್ತೇನೆ ಅಂದರೆ ಆಗೋದಿಲ್ಲ. ಅಧಿಕಾರಿಗಳದು ಎಮ್ಮೆ ಚರ್ಮ ಇದ್ದ ಹಾಗೆ. ಎಷ್ಟು ಚುಚ್ಚಿದರೂ ಅವರಿಗೆ ಸ್ವಲ್ಪವೂ ಆತ್ಮಗೌರವ ಅನ್ನೋದಿಲ್ಲ. ಹೇಳಿದರೆ, ಆಯಿತು. ಸ್ವಾಮಿ ಮಾಡುತ್ತೇನೆ. ಏನ್ಮಾತ್ತಾರೆ. ನಾನು ಈ ಸದನದ ಸದಸ್ಯನಾಗಿ ಹತ್ತುವರ್ಷ ಕೆಲಸ ಮಾಡಿದ್ದೇನೆ. ಒಂದು ಕಂಪ್ಲೇಂಟ್ ಕೊಟ್ಟರೆ ಎರಡು ಮೂರು ತಿಂಗಳಾದರೂ ಅಟೆಂಡ್ ಮಾಡೋದಿಲ್ಲ. ನನ್ನ ಕ್ಷೇತ್ರದಲ್ಲಿ ಸುಮಾರು 3 ತಿಂಗಳ ಹಿಂದೆ ಕರೆಂಟಿನ ಒಂದು ಅಚಾತುರ್ಯ ನಡೆಯಿತು. ಮೂರು ಜನ ಹರಿಜನ ಹುಡುಗರು, ನಾಲ್ಕೈದು ಎಮ್ಮೆಗಳು ಎಲ್ಲ ಸತ್ತು ಹೋದವು.

ಏನಾದರೂ 500 ರೂಪಾಯಿಗಳ ಪರಿಹಾರವನ್ನು ಕೊಡಿ ಎಂದು ಹೇಳಿದರೆ ಈ ಸರ್ಕಾರಕ್ಕೆ 50 ರೂಪಾಯಿಗಳ ಪರಿಹಾರಧನವನ್ನು ಕೊಡುವುದಕ್ಕೂ ಯೋಗ್ಯತೆ ಇಲ್ಲ ದಯವಿಟ್ಟು ಇದಕ್ಕ ಕೆ.ಇ.ಬಿ. ಇಲಾಖೆಯವರು ಉತ್ತರವನ್ನು ಕೊಡಬೇಕು. ಯಾವ ಹತ್ತಿರ ಹೋಗಿ ನಾವು ಹೇಳಬೇಕು? ನನ್ನ ರಕ್ತ ಕುದಿಯುತ್ತಿದೆ ಮಾನ್ಯ ಅಧ್ಯಕ್ಷರೇ ಗ್ರಾಮೀಣ ಪ್ರದೇಶದಲ್ಲಿ ಹೋದರೆ ಜನ ಶಾಪ ಹಾಕುತ್ತಿದ್ದಾರೆ. ಬೀದರ್‌ನಲ್ಲಂತೂ ಪರಿಸ್ಥಿತಿ ಯಾವ ಮಟ್ಟಕ್ಕೆ ಬಂದಿದೆ ಎಂದು ಹೇಳಿದರೆ ಅಲ್ಲಿ ಮಿನಿ ವಾಟರ್ ಸಪ್ಲೈಸ್‌ಗಳು, ವಾಟರ್ ಸಪ್ಲೈ ಸ್ಕೀಮ್‌ಗಳು ಸಂಪೂರ್ಣವಾಗಿ ಒಣಗಿ ಹೋಗಿದೆ. ಜನರಿಗೆ ಕುಡಿಯುವುದಕ್ಕೂ ನೀರು ಇಲ್ಲ ಅಂಥ ಪರಿಸ್ಥಿತಿ ಬಂದಿದೆ. ನೀವು ಇಲಾಖೆಯವರು ಏನು ಮಾಡಿದ್ದೀರಿ? ಯಾರಿಗಾದರೂ ಹೇಳುವುದಕ್ಕೆ ಹೋದರೆ ಅಧಿಕಾರಿಗಳು ಅದನ್ನು ಕೇಳತಕ್ಕಂಥ ಒಂದು ಸೌಜನ್ಯವನ್ನು ಕೂಡ ತೋರಿಸುವುದಿಲ್ಲ. ಆದುದರಿಂದ ನಾನು ತಮ್ಮ ಮನಸ್ಸನ್ನು ಒಲಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದೇನೆ. ಇದು ಬಹಳ ಗಂಭೀರವಾಗಿರತಕ್ಕಂಥ ಪ್ರಶ್ನೆ ಇಡೀ ರಾಜ್ಯದ ರೈತ ಸಮುದಾಯಕ್ಕೆ ಸೇರಿರತಕ್ಕಂಥದ್ದು, ವ್ಯವಸಾಯಕ್ಕೆ ನೀರು ಇರಲಿ, ಕುಡಿಯುವುದಕ್ಕೂ ಸಹ ನೀರು ಇಲ್ಲ. ಆದುದರಿಂದ ಈ ನಿಲುವಳಿ ಸೂಚನೆಗೆ ಅವಕಾಶವನ್ನು ಮಾಡಿಕೊಬೇಡಬೇಕೆಂದು ಕೇಳುತ್ತೇನೆ.

ಅಧ್ಯಕ್ಷರು : ಚರ್ಚೆಗೆ ಇದನ್ನು ಯಾವತ್ತು ತೆಗೆದುಕೊಳ್ಳೋಣ?

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ : ಇವತ್ತೇ ಅವಕಾಶ ಕೊಡಬೇಕು ಸ್ವಾಮಿ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಅದಷ್ಟು ಬೇಗ ಇದನ್ನು ಇತ್ಯರ್ಥ ಮಾಡಬೇಕು. ಸ್ವಾಮಿ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ನಮ್ಮ ಕ್ಷೇತ್ರಗಳಿಗೆ ಹೋಗದೇ ಇರತಕ್ಕಂಥ ಪರಿಸ್ಥಿತಿ ಬಂದಿದೆ. ಸ್ವಾಮಿ.

(ಗೊಂದಲ)

+ ಶ್ರೀ ಆರ್.ಎಲ್. ಜಾಲಪ್ಪ : ಮಾನ್ಯ ಅಧ್ಯಕ್ಷರೇ, ಈಗ ತಾನೆ ನಮ್ಮ ಗಂಡಸಿ ಸ್ನೇಹಿತರು ಇದರ ಬಗ್ಗೆ ಈಗಾಗಲೇ ಬೆಳಕನ್ನು ಚೆಲ್ಲಿದ್ದಾರೆ. ಬಹಳ ಸಂಕಟದಿಂದ ಈ ಸದನದಲ್ಲಿ ಇದನ್ನು ನಾವು ಪ್ರಸ್ತಾಪಮಾಡಿದ್ದೇವೆ. ನಾನು ಸುಮಾರು ಹತ್ತು ತಿಂಗಳ ಹಿಂದೆ ಕೆ.ಇ.ಬಿ. ಛೇರ್ಮನ್‌ರವರ ಆಫೀಸಿಗೆ ಹೋಗಿದ್ದೇ, ಅವರಿಗೆ ಹೇಳಿದೆ, ನೋಡಿ ನಮ್ಮ ತಾಲ್ಲೂಕಿನೊಳಗೆ ಇಷ್ಟೆಲ್ಲಾ ಸಮಸ್ಯೆಗಳು ಇದೆ. ನೀವು ಏನಾದರೂ ಮಾಡಿ ಇದನ್ನು ಸರಿ ಮಾಡದಿದ್ದರೆ ನಾವು ವ್ಯವಸಾಯವನ್ನು ಮಾಡುವುದಕ್ಕಾಗುವುದಿಲ್ಲ. ಊಟ ಮಾಡುವುದಕ್ಕಾಗುವುದಿಲ್ಲ. ಸಾಲಗಳನ್ನು ಕೂಡ ಸಿಕ್ಕಾಪಟ್ಟೆ ಮಾಡಿಕೊಂಡಿದ್ದೇವೆ. ನೀವು ಆರು ಗಂಟೆಗೆ ವಿದ್ಯುತ್ತನ್ನು ನಿಲ್ಲಿಸುತ್ತೀರಾ, ನಿಲ್ಲಿಸಿ ಅಥವಾ ಇನ್ನು ಎರಡು ಗಂಟೆಗೆ ನಿಲ್ಲಿಸುತ್ತೀರಾ, ನಿಲ್ಲಿಸಿ, ಇನ್ನುಳಿದ ಸಮಯಗಳಲ್ಲಿ ತೊಂದರೆಯಾಗದ ಹಾಗೆ ನೀವು ಪವರ್ ಸಪ್ಲೈಯನ್ನು ಮಾಡಿ. ಟ್ರಾನ್ಸ್‌ಫಾರ್ಮರ್‌ಗಳನ್ನು ಬದಲಾಯಿಸಬೇಕೋ ಅದನ್ನು ಏನು ಮಾಡಬೇಕೋ ಆ ಕರ್ಮ ನಮಗೆ ಗೊತ್ತಾಗುವುದಿಲ್ಲ. ನೀವು ದಯವಿಟ್ಟು ಮಾಡಿ ಎಂದು ಹೇಳಿದೆ. ಅವರು ನನಗೆ ಎರಡು ತಿಂಗಳು ಟೈಮನ್ನು ಕೊಡಿ ಎಂದು ಹೇಳಿದರು. ನಾವು 60 ಪಂಪ್ ಸೆಟ್ಟುಗಳನ್ನು ಎನರ್ಜೈಸ್ ಮಾಡಬೇಕು. ನಮಗೆ ಮಂತ್ರಿಗಳು ಹೇಳಿಬಿಟ್ಟಿದ್ದಾರೆ. ಆದಾದಮೇಲೆ ನಿಮ್ಮದನ್ನು ಅಟೆಂಡ್ ಮಾಡುತ್ತೇವೆ ಎಂದು ಹೇಳಿದರು. ಹೋಗಲಿ, ಎರಡು ತಿಂಗಳು ಟೈಮ್‌ನ್ನು ತೆಗೆದುಕೊಳ್ಳಿ ಎಂದು ಹೇಳಿದೆ. ಏಪ್ರಿಲ್ ಮೇ ತಿಂಗಳುಗಳಲ್ಲಿ ಆದರೂ ಮಾಡಿ ಎಂದು ಹೇಳಿದೆ. ಸ್ವಾಮಿ ಇವತ್ತಿನವರೆಗೂ ಅಟೆಂಡ್ ಮಾಡಲಿಲ್ಲ. ಸಾಲ ಮಾಡಿ ಬಡವರುಗಳು ವಿದ್ಯುತ್ತನ್ನು ಹಾಕಿಸಿಕೊಂಡಿದ್ದಾರೆ. ಪಂಪ್ ಸೆಟ್ಟುಗಳಿಗೆ ಲಾಸ್ಟ್ ಟೈಮ್ ನೀವು ಏನು ಎನರ್ಜೈಸ್ ಮಾಡಿದ್ದೀರಿ ಅದರಿಂದ ನೀವು ಅವರು ನೀರನ್ನು ಪಡೆಯದಿದ್ದರೆ ಅವರು ಸಾಲವನ್ನು ಹೇಗೆ ಕಟ್ಟಬೇಕು? ಅವರು ಏನು ಬೆಳೆಯನ್ನು ಬೆಳೆಯಬೇಕು? ಅವರು ಏನು ತಿನ್ನಬೇಕು? ಅವರ ಮಕ್ಕಳನ್ನು ಏನು ಮಾಡಬೇಕು ರಾತ್ರಿ ಹೊತ್ತಾದರೂ ಪವರ್ ಸಪ್ಲೈ ಸರಿಯಾಗಿ ಕೊಡುವುದಕ್ಕೆ ಏರ್ಪಾಡು ಮಾಡಿ. ಇಲ್ಲದಿದ್ದರೆ ಏನು ಸರ್ಕಾರ ಇದು? ಏನು ಮಂತ್ರಿಗಳು? ನಿಮ್ಮ ಅಧಿಕಾರಿಗಳು ಏನು ಮಾಡುತ್ತಿದ್ದಾರೆ? ಬೇಜವಾಬ್ದಾರಿಯ ವರ್ತನೆ ಬೇರೆ. ಯಾರಾದರೂ ಹೋಗಿ ಕೇಳಿದರೆ ನಿಮ್ಮ ಎಂಎಲ್‌ಎಗೆ ಹೇಳಿ. ನಿಮ್ಮ ಮಂತ್ರಿಗಳಿಗೆ ಕೇಳಿ ಈ ರೀತಿಯ ಒಂದು ಬೇಜವಾಬ್ದಾರಿತನದ ಉತ್ತರವನ್ನು ಕೊಡುತ್ತಿದ್ದಾರೆ. 28 ನೇ ತಾರೀಖು ನನ್ನ ತಾಲ್ಲೂಕಿನಲ್ಲಿ ವಿಧಿಯಿಲ್ಲದೆ I have to lead a protest. ನನ್ನನ್ನು ಬಿಟ್ಟು ಹೋಗಿದ್ದಾರೆ ಜನರು. 28 ನೇ ತಾರೀಖಿಗೆ ಅವರು ಪ್ರೊಟೆಸ್ಟ್ ಇಟ್ಟು ಕೊಂಡಿದ್ದರು. ಏನಾದರೂ ಇದರ ಬಗ್ಗೆ ವ್ಯವಸ್ಥೆಯನ್ನು ಮಾಡಿ. ಸುಮ್ಮನೆ ಆರಾಮಾಗಿ ಸಂಬಳಗಳನ್ನು ತೆಗೆದುಕೊಂಡು ಕುಳಿತುಕೊಳ್ಳುವುದೇ? ನೀವು ಏನಾದರೂ ವ್ಯವಸ್ಥೆಯನ್ನು ಮಾಡಿಸುವುದಿಲ್ಲವೇ? ಮಾನ್ಯ ರಾಮಪ್ಪನವರೇ, ತಾವು ತಮ್ಮದು ವ್ಯವಸಾಯವೋ ವ್ಯಾಪಾರವೋ? ಸ್ವಾಮಿ, ಒಂದು ಉದಾಹರಣೆಯನ್ನು ಕೊಡುತ್ತೇನೆ. ನನ್ನನ್ನು ಒಂದು ಫಂಕ್ಷನ್‌ಗೆ ಕರೆದರು. ಅಲ್ಲಿ ವಿದ್ಯುಚ್ಛಕ್ತಿ ಇಲ್ಲದೇ ಪೆಟ್ರೋಮ್ಯಾಕ್ಸ್‌ನ್ನು ಹಚ್ಚಿಕೊಂಡು ನಡೆಸಿದರು. ಅಲ್ಲಿ ವಿದ್ಯುಚ್ಛಕ್ತಿ ಸರಬರಾಜು ಇಲ್ಲದೆ ದೀಪಗಳು ಕೂಡ ಆಂಟುವುದಿಲ್ಲ. ಗ್ರಾಮ ಪಂಚಾಯತಿಯವರು ಮತ್ತು ಮಂಡಲಪಂಚಾಯಿತಿಯವರು ಹಳ್ಳಿಗಳಲ್ಲಿ ಟ್ಯೂಬ್ ಲೈಟುಗಳನ್ನು ಹಾಕಿಸಿದರು. ಒಂದು ಕೂಡ ಉರಿಯುವುದಿಲ್ಲ. ನನ್ನನ್ನು ಇನ್ನೊಂದು ಫಂಕ್ಷನ್‌ಗೆ ಕರೆದಿದ್ದರು ಅಲ್ಲಿಗೆ ನಾನು ಹೋದೆ. ಒಬ್ಬರ ಮುಖ ಒಬ್ಬರಿಗೆ ಕಾಣುತ್ತಿರಲಿಲ್ಲ. ದೀಪ ಮಿಣಮಿಣ ಎನ್ನುತ್ತಿತ್ತು. ಫಂಕ್ಷನ್

ಎಲ್ಲಾ ಆದಮೇಲೆ ಸಾಯಂಕಾಲ ಊಟಕ್ಕೆ ಇಟ್ಟರು. ಅಲ್ಲಿ ಊಟಕ್ಕೆ ಇಟ್ಟರೆ ಎಲೆ ಮೇಲೆ ಏನಿದೆ? ಅದು ಎಲ್ಲಿದೆ ಎಂದು ಗುರುತು ಸಿಗದಿದ್ದರೆ ಹೇಗೆ? ಅಷ್ಟರ ಮಟ್ಟಿಗೆ ಪವರ್ ಇದ್ದರೆ ನಾವು ಏನು ಮಾಡುವುದು? ಆಮೇಲೆ ಎಲ್ಲವನ್ನೂ ಕಲೆಸಿಬಿಟ್ಟು ಕರ್ಣ ರಸಾಯನ ಮಾಡಿ ತಿಂದು ಬಂದಿದ್ದಾಯಿತು. ಇಷ್ಟೊಂದು ಆಗಬಾರದು. ಸ್ವಾಮಿ ಲೆತರ್ಜಿ ಇರಬೇಕು. ಈ ರೀತಿ ಇರಬಾರದು. ಏಕೆಂದರೆ ನಿಮ್ಮಲ್ಲಿ 180 ಜನ ಇದ್ದೀರಿ ನಿಮ್ಮನ್ನು ಯಾರೂ ಅಲ್ಲಾಡಿಸುವುದಿಲ್ಲ. ಇನ್ನು ಹತ್ತು ವರ್ಷ ಇರಿ. ಆದರೆ ಈ ರೀತಿ ಆಡಳಿತವನ್ನು ನಡೆಸಬೇಡಿ. ಯೋಗ್ಯತೆ ಇದ್ದರೆ ಆಡಳಿತ ನಡೆಸಿ. ಇಲ್ಲದಿದ್ದರೆ ಬಿಟ್ಟುಹೋಗಿ ಎಂದು ಹೋದಸಾರಿ ಸದನದಲ್ಲಿ ಹೇಳಿದ್ದೆ ಇದರ ಬಗ್ಗೆ ಏನಾದರೂ ಒಂದು ಮಾಡಿ. ಈಗ ಬರೀ ರಾಮಪ್ಪನವರಿಂದ ಒಬ್ಬರಿಂದಲೇ ಇದನ್ನು ಸಾಲ್ವ್ ಮಾಡುವುದಕ್ಕಾಗುವುದಿಲ್ಲ. ಅವರ ಮಾತನ್ನು ಯಾರು ಕೇಳುತ್ತಾರೆ? ಕೇಳುವುದಿಲ್ಲ. ಏಕೆಂದರೆ ಛೇರ್ಮನ್‌ರವರಿಗೆ ರಕ್ಷಣೆ ಇದೆ. ಪಾಪ, ಅವರನ್ನು ಯಾರು ಕೇಳುತ್ತಾರೆ? ಅವರಿಗೆ ರಕ್ಷಣೆ ಇದೆ. ಅವರ ಅಧಿಕಾರಿಗಳಿಗೆ ರಕ್ಷಣೆ ಇದೆ. ಅವರು ಏನೂ ಬೇಕೋ, ಅದನ್ನು ಮಾಡಿಕೊಳ್ಳುತ್ತಾರೆ.

ಶ್ರೀ ಎಂ.ರಾಮಪ್ಪ : ಲೈನ್ ತಪ್ಪುತ್ತಿದ್ದೀರಿ?

ಶ್ರೀ ಆರ್. ಎಲ್. ಜಾಲಪ್ಪ : ಸ್ವಾಮಿ ಏನೂ ತಪ್ಪಿಲ್ಲ, ಏನೂ ಇಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ : ನಿಮ್ಮ ಲೈನ್ ತಪ್ಪಿದ ಹಾಗೆ ತಪ್ಪಿಲ್ಲ. ವಿದ್ಯುಚ್ಛಕ್ತಿ ಲೈನ್ ತಪ್ಪಿದೆಯಲ್ಲ, ಅಷ್ಟು ತಪ್ಪಿಲ್ಲ.

(ಗೊಂದಲ)

ಶ್ರೀ ಆರ್. ಎಲ್. ಜಾಲಪ್ಪ : ರಾಮಪ್ಪನವರು ಲಂಚ ತೆಗೆದುಕೊಂಡರು ಎಂದು ಹೇಳಿದ್ದೇನೆಯೇ? ಹಾಗೇ ಹೇಳಿಲ್ಲ.

(ಗೊಂದಲ)

ಶ್ರೀ ಆರ್.ಎಲ್. ಜಾಲಪ್ಪ : ಇದಕ್ಕೆ ಬರೀ ಸಮಯ ಕೊಡುವುದರಿಂದಾಗಲಿ, ಅಥವಾ ಇನ್ನೇನೊ ಮಾಡುವುದರಿಂದ ಆಗುವುದಿಲ್ಲ. ತೀರ್ಮಾನ ಮಾಡುವುದಕ್ಕೆ ಆಗದೆ ಇದ್ದರೆ ಸರ್ಕಾರವನ್ನು ಬಿಟ್ಟು ಹೋಗಬೇಕು.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಇವತ್ತಿನ ದಿವೆಸ ತಮ್ಮ ಗಮನಕ್ಕೆ ತರತಕ್ಕದ್ದು ಏನೆಂದರೆ ಇದು ಬಹಳ ಗಂಭೀರವಾದಂತಹ ಪರಿಸ್ಥಿತಿ ಇದರ ಬಗ್ಗೆ ಈ ಸಭೆಯದಲ್ಲಿ ಸುಮಾರು ಎಂಟು ತಿಂಗಳ ಹಿಂದೆ ಚರ್ಚೆ ನಡೆದು ಎಲ್ಲಾ ವಿರೋಧ ಪಕ್ಷದವರನ್ನು ಕೆರದು ಮಾತು ಕತೆ ಮಾಡುತ್ತೇವೆಂದು ಹೇಳಿದರು. ಈಗ ನಾನು ಸಂಸದೀಯ ಸಚಿವರಾದಂಥ ಮಾನ್ಯ ವೀರಪ್ಪ ಮೊಯಿಲಿಯವರ ಗಮನಕ್ಕೆ ತರುತ್ತಿದ್ದೇನೆ. ಈ ಸಭೆಯಲ್ಲಿ ವಿದ್ಯುಚ್ಛಕ್ತಿ ಮಂಡಳಿಯ ವೈಖರಿಯ ಬಗ್ಗೆ, ವಿದ್ಯುಚ್ಛಕ್ತಿ ಮಂಡಲಿಯ ಅಧ್ಯಕ್ಷತೆಯ ಬಗ್ಗೆ ರೈತರಿಗೆ ಆಗಿರುವ ತೊಂದರೆಯ ಬಗ್ಗೆ ಚರ್ಚೆ ಮಾಡಿದಾಗ, ಎಲ್ಲಾ ವಿರೋಧಪಕ್ಷದ ನಾಯಕರನ್ನು ಕರೆದು ಮಾತುಕತೆಯಾಡಿ ಇದರ ಬಗ್ಗೆ ಸಲಹೆ ತೆಗೆದುಕೊಂಡು ನಾವು ಮುಂದೆ ಹೋಗುತ್ತದೆಂದು ಹೇಳಿದಿರಿ. ಇವತ್ತಿಗೂ ನೀವು ಯಾರನ್ನಾದರೂ ಕರೆದಿದ್ದೀರಾ? ನೀವು ಬರೀ ಮಾಡುವುದು ಇದು ಆಗಿದೆಯೇ ಹೊರತು ಎಲ್ಲಿ ಯಾವತ್ತು ಮಾಡುವುದು ಈ ಬಗ್ಗೆ ಏನು ಮಾಡಿದ್ದೀರಿ. ಯಾವ ನಿರ್ಣಯ ತೆಗೆದುಕೊಳ್ಳುತ್ತೀರಿ?

ಶ್ರೀ ಬಿ.ಹೆಚ್. ಬನ್ನಿಕೋಡ್ : ನಾಳೆ ಎಂದು ಗೋಡೆಯ ಮೇಲೆ ಬರೆದುಬಿಡಿ

ಶ್ರೀ ವಾಟಾಳ್ ನಾಗರಾಜ್ : ವೈಯಕ್ತಿಕವಾಗಿ ರಾಮಪ್ಪನವರ ಬಗ್ಗೆ ನಾನು ಏನೂ ಹೇಳುವಂತಿಲ್ಲ, ಅವರಿಗೆ ಅಕಾರ ಇದೆ, ಜೋರಾಗಿದ್ದಾರೆ. ದಪ್ಪವಾಗಿದ್ದಾರೆ. ಇದೆಲ್ಲಾ ನಡೆಯುವುದಿಲ್ಲ, ಸರಿಯಾದ ರೀತಿಯಲ್ಲಿ ನೀವು ನಿಮ್ಮ ಇಲಾಖೆಯ ಬಗ್ಗೆ ಒಂದು ಹಿಡಿತ ಇಟ್ಟುಕೊಳ್ಳಲಿಲ್ಲ ಎಂದರೆ ಬಹಳ ಕಷ್ಟವಾಗುತ್ತದೆ. ವಿದ್ಯುಚ್ಛಕ್ತಿ ಮಂಡಳಿಯ ಅಧ್ಯಕ್ಷರ ಹತ್ತಿರ ನಾನು 20 ಸಾರಿ ಹೋಗಿದ್ದೇನೆ. ನಮ್ಮ ತಾಲ್ಲೂಕಿನ ಬಗ್ಗೆ ಅಲ್ಲಿನ ಪರಿಸ್ಥಿತಿ ಕೆಟ್ಟಿರುವ ಬಗ್ಗೆ ಹೇಳಿದ್ದೇನೆ. ನಮ್ಮ ಚಾಮರಾಜ ನಗರ ತಾಲ್ಲೂಕ್ ಒಂದರಲ್ಲೇ 5 ಕೋಟಿ ರೂಪಾಯಿಯ ಬೆಳೆನಾಶವಾಗಿದೆ ಅಂದಮೇಲೆ ಈ ರಾಜ್ಯದಲ್ಲಿ ಎಷ್ಟು ನಷ್ಟವಾಗಿದೆ? ಈ ಬಗ್ಗೆ ಸರ್ಕಾರ ಇಷ್ಟು ಲಘುವಾಗಿ ತಿಳಿದುಕೊಂಡರೆ ಇದು ಸರಿಯಲ್ಲ, ನಾವೇನೂ ಗಂಭೀರವಾಗಿ ಈ ಸದನದಲ್ಲಿ ಕೇಳುತ್ತಿದ್ದೇವೆ. ಸದನ ಬಿಟ್ಟು ನಂತರ ನಮ್ಮ ಕ್ಷೇತ್ರಗಳಿಗೆ ಹೋದರೆ ಜನ ನಮ್ಮನ್ನು ಫೇರಾವ್ ಮಾಡುತ್ತಾರೆ. ಲೈಟ್ ಎಲ್ಲಿ, ದೀಪ ಎಲ್ಲಿ, ಎಂದು ಕೇಳುತ್ತಾರೆ, ತಂತಿ ಉಂಟು ಬಲ್ಬು ಉಂಟು, ದೀಪ ಇಲ್ಲ, ಎಲ್ಲಿಗೆ ನಾವು ಹೋಗೋಣ ಯಾರ ಹತ್ತಿರ ಹೋಗಬೇಕು. ಕರೆಂಟ್ ಇಲ್ಲವೇ ಇಲ್ಲ, ಏನು ಪರಿಸ್ಥಿತಿ ಆಗಿದೆ. ನಿಮ್ಮ ಸರ್ಕಾರ ದಿವಾಳಿಯಾಗಿದೆಯೋ ನಿಮ್ಮ ಸರ್ಕಾರ ಕೆಟ್ಟಿದೆಯೋ ನಿಮ್ಮ ಆಡಳಿತ ಸರಿ ಇಲ್ಲವೋ ಹೇಳಿ. ಮೇಣದ ಬತ್ತಿ ಉರಿದ ಹಾಗೆ ಲೈಟ್ ಉರಿಯುತ್ತಿದೆ. ನಾವು ಯಾರನ್ನು ಕೇಳಬೇಕು ಹೇಳಿ. ಎರಡು ಲಕ್ಷದ ಎಂಭತ್ತು ಸಾವಿರ ಪಂಪ್ ಸೆಟ್ಟುಗಳು ಈ ರಾಜ್ಯದಲ್ಲಿ ಹಾಳಾಗಿ ಹೋಗಿದೆ ರೈತರು ಬ್ಯಾಂಕ್‌ನಲ್ಲಿ ಸಾಲ ಮಾಡಿರುತ್ತಾರೆ. ಬೆಳೆಯಿಂದ ತಾನೆ ಸಾಲ ತೀರಿಸುವುದು. ಆದ್ದರಿಂದ ಇದಕ್ಕೆ ವಿಶೇಷವಾಗಿ ಚರ್ಚೆಗೆ ಅವಕಾಶ ಮಾಡಿಕೊಂಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಚರ್ಚೆಬೇಡ, ಸದನದ ಒಂದು ಸಮಿತಿಯನ್ನು ಮಾಡಿ ವಾಸ್ತವಾಂಶ ತಿಳಿದುಕೊಳ್ಳುವುದಕ್ಕೆ 4-5 ಜನಸದಸ್ಯರನ್ನು ಕಳುಹಿಸಿ.

ಶ್ರೀ ವಾಟಾಳ್ ನಾಗರಾಜ್ : ಸರ್ಕಾರ ಇದರ ಬಗ್ಗೆ ಪರಿಣಾಮಕಾರಿಯಾದಂಥ ಕಾರ್ಯಕ್ರಮವನ್ನು ಕೈಗೊಂಡಿಲ್ಲ, ತಾಲ್ಲೂಕು ಜಿಲ್ಲಾ ಮಟ್ಟದಲ್ಲಿ ರಾಜ್ಯಮಟ್ಟದಲ್ಲಿ ವಿದ್ಯುಚ್ಛಕ್ತಿ ಮಂಡಲಿಯನ್ನು ಮುತ್ತಿಗೆ ಹಾಕುತ್ತೇವೆ. ನಾವು ಬಿಡುವುದಿಲ್ಲ.ನಾವು ಸದನವನ್ನು ನಡೆಸುವುದಕ್ಕೂ ಬಿಡುವುದಿಲ್ಲ, ಎನ್ನತಕ್ಕ ಎಚ್ಚರಿಕೆಯನ್ನು ಸರ್ಕಾರಕ್ಕೆ ನಾನು ಕೊಡುತ್ತಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಇಡೀ ರಾಜ್ಯದಲ್ಲಿ ವಿದ್ಯುತ್ ಸರಬರಾಜು ಸಂಪೂರ್ಣ ಹದಗೆಟ್ಟಿದೆ.ಬೋರ್ ವೆಲ್‌ಗಳಿಂದ ನೀರನ್ನು ತೆಗೆದುಕೊಳ್ಳುವುದಕ್ಕೆ ಆಗುತ್ತಿಲ್ಲ, ಕುಡಿಯುವ ನೀರಿನ ಸಮಸ್ಯೆಯಂತೂ ಜಾಸ್ತಿಯಾಗಿದೆ. ಆದ್ದರಿಂದ ಈ ಸದನದ ಒಂದು ಸಮಿತಿಯನ್ನು ಕಳುಹಿಸಿ ಸಂಬಂಧಪಟ್ಟ ಮಂತ್ರಿಗಳು ಇದನ್ನು ತಿಳಿದುಕೊಂಡು ಸರಿಪಡಿಸುವುದಕ್ಕೆ ಕಾರ್ಯಕ್ರಮಗಳನ್ನು ರೂಪಿಸಲಿ. ಇದರ ಬಗ್ಗೆ ಹಿಂದೆ ತಿಂಗಳಾನುಗಟ್ಟಲೆ ಚರ್ಚೆಯಾಗಿದೆ. ಇಲ್ಲಿ ಹೇಳುವವರು ಕೇಳುವವರು ಯಾರು ಇಲ್ಲ.

ಶ್ರೀ ಸಿ.ಬೈರೇಗೌಡ :ಇದರ ಬಗ್ಗೆ ಅನೇಕ ಸಂದರ್ಭಗಳಲ್ಲಿ ಚರ್ಚೆಯಾಗಿದೆ. ಸರ್ಕಾರದವರು ಭರವಸೆಯನ್ನು ಸಹ ಕೊಟ್ಟಿದ್ದಾರೆ. ಈ ಭರವಸೆ ಯಾವುದೂ ಕೂಡ ಈಡೇರಿಲ್ಲ. ನಮ್ಮ ಜಿಲ್ಲೆಯಲ್ಲಿ ಇವತ್ತು ಸುಮಾರು 2ಲಕ್ಷ ಎಕರೆಯಲ್ಲಿ ತರಕಾರಿ ಬೆಳೆಯುತ್ತಿದ್ದಾರೆ ರೇಷ್ಮೆ ಬೆಳೆಯ ಬಗ್ಗೆ ಚರ್ಚೆಯಾಗಿದೆ. ಒಂದು ಕಡೆ ಊಜಿನೊಣದಿಂದ ರೈತರಿಗೆ ನಷ್ಟವಾಗಿರತಕ್ಕದ್ದು ಕೊಳವೆ ಬಾವಿಗಳಲ್ಲಿರುವ ಅಲ್ಪಸ್ವಲ್ಪ ನೀರನ್ನು ತೆಗೆದುಕೊಳ್ಳುವುದಕ್ಕೆ ರೈತರು ಕಣ್ಣೀರು ಇಡುತ್ತಿದ್ದಾರೆ.

ಅಧ್ಯಕ್ಷರು : ನೀವು ವಿವರಕ್ಕೆ ಹೋಗುತ್ತಿದ್ದೀರಿ.

ಶ್ರೀ ಸಿ.ಬೈರೇಗೌಡ : ಮಾನ್ಯ ರಾಜೂಗೌಡರು ಪಬ್ಲಿಕ್ ಅಂಡರ್ ಟೇಕಿಂಗ್ಸ್ ಕಮಿಟಿಯ ವರದಿಯನ್ನು ಕೊಟ್ಟಿದ್ದಾರೆ. ನಾವು ನಮ್ಮ ಜಿಲ್ಲೆಯಲ್ಲಿನ ಅನೇಕ ತೋಟಗಳಿಗೆ ಹೋಗಿದ್ದೇವೆ. ಅಲ್ಲಿಯಾವ ರೀತಿ ಮೆಂಟೇನ್ ಮಾಡುತ್ತಿದ್ದಾರೆಂದು ಅವರೇ ಕಣ್ಣಾರೆ ಹೋಗಿ ನೋಡಿದ್ದಾರೆ.

1.10 ಪಿ.ಎಂ.

ಪಂಜಾಬಿನಲ್ಲಿರುವ ಭಯೋತ್ಪಾದಕರ ಗುಂಡುಗಳನ್ನು ಎದುರಿಸಿ ನಮ್ಮ ರಾಜ್ಯದ ಜಿಲ್ಲೆಗಳಲ್ಲಿರತಕ್ಕಂಥ ರೈತರು ಇವ್ಹೊತ್ತು 70-80 ಕೆ.ಜಿ. ಇರುವ ಆಲೂಗಡ್ಡೆಯ ಮೂಟೆಗೆ 1,200 ರೂಪಾಯಿಗಳವರೆಗೂ ಕೊಟ್ಟಿದ್ದಾರೆ. ಅಂತಹ ಬೆಳೆ ಇವ್ಹೊತ್ತಿನ ದಿವಸ ಬೆಳಗುತ್ತಿದೆ. ನಮ್ಮ ಹೊಟ್ಟೆ ಉರಿತಕ್ಕಂಥ ಕೆಲಸವನ್ನು ಮಾಡುತ್ತಿದ್ದಾರೆ.

ಅಧ್ಯಕ್ಷರು : ಇವ್ಹೊತ್ತು ಸಾಯುಂಕಾಲ 4 ಗಂಟೆಗೆ ಸದನದ ಕಾರ್ಯಕಲಾಪಗಳ ಸಮಿತಿ ಸಭೆ ಇದೆ. ನೀವು ಸಮಿತಿಸಭೆಯ ಸದಸ್ಯರಾಗಿರುವುದರಿಂದ ಸಭೆಗೆ ಬನ್ನಿ, ಇದರ ಬಗ್ಗೆ ಯಾವಾಗ ಚರ್ಚೆ ಮಾಡಬೇಕೆಂಬುದರ ಬಗ್ಗೆ ತೀರ್ಮಾನ ಮಾಡೋಣ. ಈ ವಿಚಾರ ಬಹಳ ಮಹತ್ವವಾಗಿದ್ದು, ಗಂಭೀರಹಾಗೂ ಭಯಂಕರವಾಗಿದೆ. ಇದೊಂದು ಅತ್ಯಂತ ಪ್ರಮುಖವಾದ ಜ್ವಲಂತ ಸಮಸ್ಯೆಯಾಗಿದೆ ಎನ್ನತಕ್ಕಂಥಾದ್ದು ನನ್ನ ಅನುಭವಕ್ಕೂ ಕೂಡ ಬಂದಿದೆ. ಆದುದರಿಂದ, ಶ್ರೀ ಶಿವರಾಮು ಅವರಾಗಲೀ, ಶ್ರೀ ಬೈರೇಗೌಡರಾಗಲೀ, ವಿರೋಧಪಕ್ಷದ ನಾಯಕರಾಗಲೀ ಮತ್ತಿತರ ಸದಸ್ಯರುಗಳಾಗಲೀ ಇದರ ಬಗ್ಗೆ ಒಟ್ಟಾರೆಚಿಂತನೆ ಮಾಡತಕ್ಕಂಥ ಕಾಲ ಬಂದಿದೆ ಎಂಬುದನ್ನು ನಾನು ಒಪ್ಪುತ್ತೇನೆ. ಇಂದು ಮಧ್ಯಾಹ್ನ ಈ ವಿಷಯವನ್ನುಕಾರ್ಯಕಲಾಪಗಳ ಸಮಿತಿ ಸಭೆ ಮುಂದಿಟ್ಟು ಒಂದು ನಿರ್ದಿಷ್ಟ ದಿನಾಂಕವನ್ನು ಗೊತ್ತು ಮಾಡಿ, ಒಂದು ಅರ್ಥಪೂರ್ಣವಾದಂಥ ಚರ್ಚೆಯನ್ನು ಮಾಡಿ. ಈ ಇಲಾಖೆಯನ್ನು ನಮ್ಮ ಹತೋಟಿಗೆ ತೆಗೆದುಕೊಳ್ಳಬೇಕಾದಂಥ ಕಾಲ ಬಂದಿದೆಯೆಂಬುದನ್ನು ನಿಮ್ಮ ಜೊತೆಗೆ ನಾನೂ ಸಹ ಒಪ್ಪುತ್ತೇನೆ.

ಶ್ರೀ ಸಿ.ಬೈರೇಗೌಡ : ಧನ್ಯವಾದಗಳು.

ವರದಿಗಳನ್ನೊಪ್ಪಿಸುವುದು.

ಶ್ರೀ ಜಿ.ರಾಜುಗೌಡ : (ಅಧ್ಯಕ್ಷರು, ಸಾರ್ವಜನಿಕ ಉದ್ದಿಮೆಗಳ ಸಮಿತಿ) ಮಾನ್ಯ ಸಭಾಧ್ಯಕ್ಷರೇ, ಸಾರ್ವಜನಿಕ ಉದ್ದಿಮೆಗಳ ಸಮಿತಿಯ 48,49,50,51 ಮತ್ತು 52ನೇ ವರದಿಗಳನ್ನು ಸಭೆಯ ಮುಂದೆಮಂಡಿಸುತ್ತಿದ್ದೇನೆ.

ಅಧ್ಯಕ್ಷರು : ವರದಿಗಳನ್ನು ಸಭೆಯ ಮುಂದೆ ಮಂಡಿಸಲಾಯಿತು.